

ಕೇಳಿಸಿಕೊಂಡು ಕೂಡಲೇ ಅದರ ಹತ್ತಿರ ಹೋಗಿ ಜೋಪಾನವಾಗಿ ಅದನ್ನು ಎತ್ತಿಕೊಂಡು ಮನೆಗೆ ತಂದರು. ತಮಗೆ ತಿಳಿದ ಹಾಗೆ ಅದಕ್ಕೆ ಔಷಧೋಪಚಾರ ಮಾಡಿದರು. ಇಪ್ಪತ್ತನಾಲ್ಕು ಗಂಟೆಯಲ್ಲಿ ಗಿಳಿ ಸುಧಾರಿಸಿಕೊಂಡಿತು. ಆದರೆ ಹಾರಲು ಶಕ್ತವಾಗಿರಲಿಲ್ಲ. ಆದರೂ ಅದನ್ನು ಉದ್ಯಾನಕ್ಕೆ ಬಿಟ್ಟುಬಂದರೆ ಅದರ ತಾಯಿ ಅಥವಾ ಜೊತೆಗಾರ ಗಿಳಿಗಳು ಹಾರಿಸಿಕೊಂಡು ಹೋದಾವು ಎಂದು ಅವರು ಯೋಚಿಸಿದರು. ಗಿಳಿಮರಿಯೂ ಹಾರುವ ಪ್ರಯತ್ನ ಮಾಡುತ್ತ ಆಗಾಗ ರೆಕ್ಕೆ ಬಡಿಯುತ್ತಿತ್ತು. ಆದರೆ ಬಲಗಡೆಯ ರೆಕ್ಕೆಗೆ ಪೆಟ್ಟಾಗಿತ್ತು. ಪ್ರಯತ್ನಪಟ್ಟು ಸ್ವಲ್ಪವೇ ಮೇಲಕ್ಕೆ ಹಾರಿ ಪುನಃ ಅಲ್ಲಿಯೇ ನೆಲಕ್ಕೆ ಕುಸಿಯುತ್ತಿತ್ತು.

ಹೀಗೆಯೇ ತುಂಬ ಹೊತ್ತು ಕಳೆಯಿತು. ಗಿಳಿಯು ರೆಕ್ಕೆ ಬಡಿಯುವುದು, ಹಾರುವುದು ಪುನಃ ಕುಸಿಯುವುದು ನಡೆದೇ ಇತ್ತು. ಸುದೇಶ್‌ಬಾಬು ಏನೋ ಕೆಲಸದ ನಿಮಿತ್ತ ಸ್ವಲ್ಪ ಹೊತ್ತಿನ ಮಟ್ಟಿಗೆ ಹೊರಗೆ ಹೋದರು. ಅವರ ಪತ್ನಿ ವರಾಂಡಾದಲ್ಲಿಯೇ ಆಚೆ ಕಡೆ ಯಾವುದೋ ಮನೆಕೆಲಸದಲ್ಲಿ ನಿರತರಾಗಿದ್ದರು. ಸ್ವಲ್ಪವೇ ಹೊತ್ತಿನಲ್ಲಿ ಅಲ್ಲಿಗೆ ಒಂದು ಬೆಕ್ಕು ವಕ್ಕರಿಸಿತು. ತಕ್ಷಣ ಗಿಳಿಮರಿ ತನ್ನ ಜೀವನಲೀಲೆ ಮುಗಿದೇ ಹೋಯಿತು ಎನ್ನುವ ಹಾಗೆ ಆರ್ತನಾದದಲ್ಲಿ ಚೀರುತ್ತ ಅಪಾಯವನ್ನು ಅರಿತು ಫಡಫಡ ಸದ್ದಿನೊಂದಿಗೆ ರೆಕ್ಕೆ ಬಡಿಯಲಾರಂಭಿಸಿತು. ಸದ್ದನ್ನು ಕೇಳಿಸಿಕೊಂಡ ಮನೆಯೊಡತಿ ತಕ್ಷಣ ತಿರುಗಿ ನೋಡಿದರೆ ಆ ಬೆಕ್ಕು ಗಿಳಿಮರಿಯ ಮೇಲೆ ಎರಗಲು ಹವಣಿಸುತ್ತಿತ್ತು. ಕೂಡಲೇ ಆಕೆ ಬೆಕ್ಕನ್ನು ಬೆದರಿಸುತ್ತ ಓಡಿ ಬಂದು ಗಿಳಿಮರಿಯನ್ನು ತನ್ನ ಬೊಗಸೆಗೆ ತುಂಬಿಕೊಂಡಳು. ಆಕೆ ಗಿಳಿಮರಿಯನ್ನು ನೇವರಿಸುತ್ತ... ‘ಅಯ್ಯೋ ಮುದ್ದಿನ ಮರಿಯೇ, ನಿನ್ನನ್ನು ನಿನ್ನ ತಂದೆ–ತಾಯಿಯ ಬಳಿಗೆ ಬಿಡುವಾ ಎಂದರೆ ನಿನಗೆ ಹಾರಲಿಕ್ಕೇ ಆಗುವುದಿಲ್ಲವಲ್ಲ...! ಇಲ್ಲಿ ನೋಡಿದರೆ ಬೆಕ್ಕು, ನಾಯಿ ನಿನ್ನ ಮೇಲೆ ಎರಗಲು ಕಾಯುತ್ತಿವೆ. ಏನು ಮಾಡೋದು...?’ ಎನ್ನುತ್ತಿರುವಾಗಲೇ ಸುದೇಶ್‌ಬಾಬು ಒಳಗೆ ಬಂದು, ‘ಏನಾಯಿತು?’ ಎಂದು ಕೇಳಿದರು. ಪತ್ನಿ ನಡೆದ ಘಟನೆಯನ್ನು ವಿವರಿಸಿದಳು. ‘ಸರಿ ಹಾಗಾದ್ರೆ. ಇದು ನಮ್ಮ ಜೊತೆಯಲ್ಲೇ ಇರಲಿ. ತಾಯಿಯಿಂದ ಬೇರೆಯಾದ ಮರಿ ನಮ್ಮ ಮಗು ಇದ್ದ ಹಾಗೇನೇ. ಇದನ್ನು ಜೋಪಾನವಾಗಿ ಸಾಕಬೇಕು. ಬಾ ಕಂದ, ನಿನಗೊಂದು ಚಂದದ ಮನೆ ಮಾಡಿಕೊಡ್ತೀನಿ...’

ಅಂದು ಸಂಜೆಯೇ ಒಂದು ಪಂಜರ ಮನೆಗೆ ಬಂತು. ಗಿಳಿಮರಿ ಪಂಜರದೊಳಗೆ ಬಂಧಿಯಾಯಿತು. ‘ಟಿಯಾಮರಿ’ ಎಂಬ ನಾಮಕರಣವೂ ಆಯಿತು. ಪಂಜರದ ಜೀವನಕ್ಕೆ ಹೊಂದಿಕೊಳ್ಳಲು ‘ಟಿಯಾ’ಗೆ ಕಷ್ಟವೇ ಆಯಿತು. ಯಾವಾಗಲೂ ತನ್ನ ತೊದಲು ರಾಗದಲ್ಲಿ ಕಿರುಚಿಕೊಳ್ಳುತ್ತಿತ್ತು. ದಿನಕಳೆದಂತೆ ‘ಟಿಯಾ’ನ ಕಿರುಚಾಟ ಕಡಿಮೆಯಾಗುತ್ತಾ ಬಂದು ಅದು ಪಂಜರದ ಬದುಕಿಗೆ ನಿಧಾನವಾಗಿ ಹೊಂದಿಕೊಳ್ಳಲಾರಂಭಿಸಿತು. ಈ ನಡುವೆ ಅಜ್ಜ–ಅಜ್ಜಿ ಆಗಾಗ ‘ಟಿಯಾಮರಿ, ಎಂದು ಕರೆಯುತ್ತ ಮಾತಾಡಿಸುತ್ತಿದ್ದರು. ಹೀಗೆ... ಅದಕ್ಕೆ ‘ಟಿಯಾ’ ಶಬ್ದದ ಅರಿವಾಗಿ ‘ಟಿಯಾ’ ಎಂದ ಕೂಡಲೆ ‘ಟೇಂ... ಟೇಂ...’ ಎಂದು ಉತ್ತರಿಸಲಾರಂಭಿಸಿತು.

* * *

ಕುಳಿತಲ್ಲಿಂದಲೇ ಆ ಇಬ್ಬರು ವೃದ್ಧರನ್ನು ನೋಡುತ್ತಾ ‘ಟಿಯಾ’ ಯೋಚಿಸತೊಡಗಿತು. ...ಪಾಪ, ಈ ಇಳಿವಯಸ್ಸಿನಲ್ಲಿ ಇಬ್ಬರೂ ಒಂಟಿಯಾಗಿಬಿಟ್ಟಿದ್ದಾರೆ. ಹೇಳಿಕೊಳ್ಳೋದಕ್ಕೆ ಇವರು ಇಬ್ಬರು ಮಕ್ಕಳ ತಂದೆ–ತಾಯಿ. ಆದ್ರೆ ಅವರು ಮಾತ್ರ ಎಷ್ಟೋ ವರ್ಷಗಳಿಂದ ಈ ಮನೆಗೆ ಕಾಲೇ ಇಟ್ಟಿಲ್ಲ. ದೊಡ್ಡ ಸಂಪಾದನೆಗಾಗಿ ವಿದೇಶಕ್ಕೆ ಹೋದವರು ಅಲ್ಲೇ ನೆಲೆಸಿದ್ದಾರೆ. ತಮ್ಮ ಹೆಂಡತಿ, ಮಕ್ಕಳ ಜೊತೆ ಐಷಾರಾಮಿ ಜೀವನ ನಡೆಸುತ್ತಿರುವ ಅವರಿಗೆ ತಮ್ಮದೇ ತಂದೆ–ತಾಯಿಯ ಬಗ್ಗೆ ಯೋಚಿಸಲು ಪುರುಸೊತ್ತೇ ಸಿಗುತ್ತಿಲ್ಲ.

ಟಿಯಾಗೆ ಚೆನ್ನಾಗಿ ಅರ್ಥವಾಗಿದೆ. ಕಳೆದ ಕೆಲವು ವರ್ಷಗಳಿಂದ ತಾನು ಪಂಜರದಲ್ಲಿ ಬಂಧಿಯಾಗಿದ್ದರೇನಂತೆ. ಇವರು ತಮ್ಮ ಮಕ್ಕಳಿಗೆ ನೀಡುವ ಪ್ರೀತಿಗಿಂತಲೂ ಹೆಚ್ಚು ಪ್ರೀತಿ–ಮಮತೆ ತನಗೆ ನೀಡಿದ್ದಾರೆ. ತಾನು ಪಂಜರದ ಕೈದಿಯಾಗಿದ್ದರೂ ಮಾನಸಿಕವಾಗಿ ಅಸ್ವಸ್ಥನಾಗಿಲ್ಲ. ಶಾರೀರಿಕವಾಗಿಯೂ ದಷ್ಟಪುಷ್ಟನಾಗಿದ್ದೇನೆ. ಪಂಜರದ ಒಳಗೇನೆ ಭೂರಿ ಭೋಜನ. ಕೆಂಪು ಮೆಣಸಿನಕಾಯಿ, ಕಡಲೆ, ಸೇಬು, ಬಟಾಣಿ... ಅಬ್ಬಾ...! ಯಾವುದಕ್ಕೂ ಕೊರತೆ ಇಲ್ಲ. ಅವರಿಬ್ಬರೂ ಪರಸ್ಪರ ಮಾತಾಡಿ ಬೇಜಾರಾದರೆ